have written. This was sent to the Agriculture Ministry in the first instance and now it is transferred to my Department. It is now being examined. My officers will call for a meeting and after the session is over I will examine the entire thing.

SRI S. R. BOMMAI.—Until such time the law is amended ತಾವು ಸಹಕಾರ ಸಂಘಗಳ ಮುಖಾಂತರ ಸಾಲ ಕೊಡುತ್ತಿದ್ದಿರಿ. ಒಬ್ಬರಿಗೆ ಇಷ್ಟು ಸಾಲ ಕೊಡಬಹುದೆಂದು ಒಂದು ಸಾರಿ ನಿಗದಿ ಮಾಡಿದ ಮೇಲೆ ಪುನಃ ಪ್ರತಿವರ್ಷವೂ ಅವನು ಏತಕ್ಕೆ ಅರ್ಜಿ ಹಾಕಬೇಕು, ಹಿಂದಿನ ವರ್ಷದ ಆಧಾರದ ಮೇಲೆ ಅವನಿಗೂ ಪ್ರತಿ ಸಾರಿಯೂ ಕೊಡಲು ಏತಕ್ಕೆ ತಾವು ಅವಕಾಶ ಮಾಡಿ ಕೊಟ್ಟಿಲ್ಲ, ಆದುದರಿಂದ ಅವನು ಪ್ರತಿವರ್ಷವೂ ಅರ್ಜಿ ಹಾಕಿಕೊಳ್ಳುವುದನ್ನು ತಪ್ಪಿಸುವುದು ಉತ್ತಮ ಇದರಿಂದ ಅವನಿಗೆ ಆಗತಕ್ಕ ತೊಂದರೆಗಳೂ ತಪ್ಪುತ್ತದೆ.

ಶ್ರೀ ವಿ. ಎಂ. ಕುರನೂರ್.—ನಾವು ಮೊದಲು ಏನು ಸ್ಯಾಂಕ್ಷನ್ ಮಾಡಿರುತ್ತೇವೆ ಅದನ್ನು ಕಡಿಮೆ ಮಾಡುವುದಕ್ಕೆ ಹೋಗುವುದಿಲ್ಲ. ನಾವು ರಿಜರ್ವ್ ಬ್ಯಾಂಕ್‌ನವರ ಇನ್ಸ್‌ಸ್ಟ್ರಕ್ಷನ್ ಪ್ರಕಾರ ಅವರಿಗೆ ಪ್ರತಿವರ್ಷವೂ ಕೊಡುತ್ತಿದ್ದೇವೆ. ಡಿ.ಸಿ.ಸಿ. ಬ್ಯಾಂಕ್‌ನವರಿಗೆ ಅವರಿಗೆ ಅವರು ಅರ್ಜಿ ಕೊಟ್ಟರುತ್ತಾರೆ ಅವರು ಅಪೆಕ್ಸ್ ಬ್ಯಾಂಕ್‌ಗೆ ಕಳುಹಿಸಿರುತ್ತಾರೆ ಅದುದರಿಂದ ನಾವು ಪ್ರತಿ ವರ್ಷವೂ ಇಂಡಿವಿಜಿಯಲ್ಸ್‌ಗೆ ಮಂಜೂರು ಮಾಡುವುದಿಲ್ಲ. ಅವನು ಒಂದು ಸಾರಿ ಅರ್ಜಿ ಕೊಟ್ಟರೆ ಆಗ ಅವರ ಹೆಸರು ರಿಜಿಸ್ಟರ್ ಆಗಿರುತ್ತದೆ, ಆಗ ಅವನು ಪ್ರತಿ ವರ್ಷ ಎಷ್ಟು ಕೇಳುತ್ತಾನೋ ಅಷ್ಟು ಹಣವನ್ನು ಬದಗಿಸಿ ಕೊಡುತ್ತಿದ್ದೇವೆ ಅದರಲ್ಲಿ ಏನೂ ತೊಂದರೆ ಇಲ್ಲವಲ್ಲಾ.....

ಶ್ರೀ ಎಸ್. ಆರ್. ಬೊಮ್ಮಾಯಿ.—ಹಾಗಾದರೆ ಪ್ರತಿವರ್ಷ ಅರ್ಜಿ ಬರಬೇಕೆಂದು ಕಾಣುತ್ತದೆ.

ಶ್ರೀ ವಿ. ಎಂ. ಕುರನೂರ್.—ಇಂಡಿವಿಜಿಯಲ್ಸ್‌ನಿಂದ ಅರ್ಜಿಗಳನ್ನು ತೆಗೆದುಕೊಳ್ಳುವುದಿಲ್ಲ. ಸೊಸೈಟಿಯವರು ಅರ್ಜಿಯನ್ನು ಡಿ.ಸಿ.ಸಿ. ಬ್ಯಾಂಕಿಗೆ ಕಳುಹಿಸುತ್ತಾರೆ, ಅವರು ಇಂಥಿಂಥ ಸೊಸೈಟಿಗಳಿಗೆ ಇಷ್ಟಿಷ್ಟು ಹಣ ಬೇಕೆಂದು ಅಪೆಕ್ಸ್ ಬ್ಯಾಂಕಿಗೆ ಕಳುಹಿಸುತ್ತಾರೆ.

(ii) Re:-hunger strike by some harijan members cultivating lands at Muchakandi tank at Bagelkot,

SRI S. S. ARAKERI (Ballolli).—Sir, I raise a matter under rule 312 regarding hunger strike, by some Harijan members before Assistant Commissioners' Office, Bagalkot sub-division regarding grant of occupancy rights in respect of lands cultivated by them for the last 10 to 15 years, at Muchakandi tank, near Bagalkot, Bijapur District.

Through you I would like to bring to the notice of the Hon, Minister for Revenue that the Harijan cultivators of Kagala Gunte and Sudike who are cultivating these tank beds since last 20 years are being forcibly evicted by Goonda elements hired by rich farmers. I want protection to be given to those Harijans. The Deputy Commissioner of Bijapur District has not taken protective measure and Civil Rights Enfocement Wing has failed to give them protection. Therefore, those cultivaters have taken decision to go on Hunger strike, That is the situation. I appeal to the Minister for Revenue to confirm the proprietory rights and grant land to them and protect them from exploitation.

† ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು, ಪರಿಜನರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರಿಗೆ ಏನಾದರೂ ರಕ್ಷಣೆ ಕೊಡಬೇಕೆಂದು ಹೇಳುತ್ತಿದ್ದಾರೆ. ಉಪವಾಸ ಮಾಡಿದವರಿಗೆಲ್ಲ ರಕ್ಷಣೆ ಕೊಡತಕ್ಕದ್ದು ನಮ್ಮ ಕರ್ತವ್ಯ ಅಲ್ಲ. ಅವರ ಬೇಡಿಕೆಗಳು ನ್ಯಾಯವಾಗಿವೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಿ, ನ್ಯಾಯವಾಗಿದ್ದರೆ ಮಾತ್ರ ಪರಿಹಾರ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ. ಉಪವಾಸ ಮಾಡಿದವರಿಗೆಲ್ಲ ಕವಿಗೊಡುವುದ ಕ್ಕಾಗುವುದಿಲ್ಲ. ಎರಡನೆಯದಾಗಿ ವಿಷಯಗಳನ್ನು ವಿವರವಾಗಿ ಹೇಳಬಯಸುತ್ತೇನೆ. ಬಾಗಲಕೋಟೆ ತಾಲ್ಲೂಕಿನ ಮುಚಕಂಡಿ ಗ್ರಾಮದ ಅಚ್ಚುಕಟ್ಟು ಪ್ರದೇಶ ಒಟ್ಟು ೧೩೭೩ ಎಕರೆ ೧೭ ಗುಂಟೆ ಇದೆ, ಅದರಲ್ಲಿ ೩ ಸರ್ವೆ ನಂಬರುಗಳು ಬರುತ್ತವೆ. ಸರ್ವೆ ನಂಬರ್ ೨೦೬ರ ವಿಸ್ತೀರ್ಣ ೮೪೦ ಎಕರೆ ೨೦ ಗುಂಟೆ, ಸರ್ವೆ ನಂಬರ್ ೫೩೮ರ ವಿಸ್ತೀರ್ಣ ೧೫೩ ಎಕರೆ ೫ ಗುಂಟೆ, ಸರ್ವೆ ನಂಬರ್ ೧೯೩ರ ವಿಸ್ತೀರ್ಣ ೩೭೬ ಎಕರೆ ೩೨ ಗುಂಟೆ. ಹೀಗೆ ಒಟ್ಟು ೧೩೭೩ ಎಕರೆ ಪ್ರದೇಶದಲ್ಲಿ ಸುಮಾರು ೬೩೩ ಎಕರೆ ೩೦ ಗುಂಟೆ ಜಾಗದಲ್ಲಿ ನೀರು ನಿಲ್ಲುವುದಿಲ್ಲ, ಹಾಗೆಯೇ ಬಯಲು ಪ್ರದೇಶವಾಗಿರುತ್ತದೆ. ಆ ಒಂದು ಪ್ರದೇಶ ೧೯೧೬ ರಿಂದಲೂ ಹಾಗೆಯೇ ಇದೆ. ಅಲ್ಲಿ ೧೯೭೫-೭೬ ರಿಂದ ಈಚೆಗೆ ಸುಮಾರು ೨೬೭ ಜನರು ೬೩೨ ಎಕರೆ ೩೦ ಗುಂಟೆ ಪ್ರದೇಶವನ್ನು 'ಟ್ಯಾಂಕ್ ಬೆಡ್' ಏರಿಯಾದಲ್ಲಿ ಅಕ್ರಮಿಸಿ ಕೊಂಡಿದ್ದಾರೆ ಅದರಲ್ಲಿ ಹರಿ ಜನ-ಗಿರಿಜನರು ದುರ್ಬಲ ವರ್ಗದವರು ಇದ್ದಾರೆ. ಇದು ನಿರ್ವಿವಾದದ ಮಾತು. ಆದರೆ, ಟ್ಯಾಂಕ್ ಬೆಡ್ ಏರಿಯಾ ಏನಿದೆ ಅಲ್ಲಿ ಅವರನ್ನು ಉಳಿಸಬೇಕೇ ಅಥವಾ ಹೊರಗೆ ಹಾಕಬೇಕೇ ಎಂಬುದು ಪ್ರಶ್ನೆ, ೨೧ನೇ ಮೇ ೧೯೭೬ ರಲ್ಲಿ ಸರ್ಕಾರದವರು ಒಂದು ನಿರ್ದೇಶನ ಹೊರಡಿಸಿ, ಟ್ಯಾಂಕ್ ಬೆಡ್ ಏರಿಯಾದಲ್ಲಿ ಅತಿ ಕ್ರಮಣ ಮಾಡಿದವರೊಬ್ಬರನ್ನು ಅಲ್ಲಿ ಇಡಕೂಡದು ಎಂದು ತಿಳಿಸಲಾಗಿದೆ. ಅದರ ಪ್ರಕಾರ ಆ ಏರಿಯಾ ದಲ್ಲಿ ಯಾರನ್ನೂ ಇಡತಕ್ಕ ಪ್ರಶ್ನೆ ಏರುವುದಿಲ್ಲ. ಅಲ್ಲಿ ಹರಿಜನರೇನಿದ್ದಾರೆ ಅವರಿಗೆ ಆ ಏರಿಯಾದೊಳಗ ಡೆಯೇ ಜಮೀನನ್ನು ಕೊಡಿ ಎಂದರೆ ಕೊಡುವುದಕ್ಕಾಗುವುದಿಲ್ಲ. ಇದಕ್ಕೆ ಮಾನ್ಯ ಸದಸ್ಯರು ಒಪ್ಪು ತ್ತಾರೆಂದು ನಂಬಿರುತ್ತೇನೆ.

ಶ್ರೀ ವೈ. ರಾಮಕೃಷ್ಣ.—ಅಲ್ಲಿ ಇನ್ನೂ ಸ್ವಲ್ಪ ಜಮೀನು ಇದೆಯೆಂದು ಹೇಳಿದ್ದೀರಲ್ಲ ಅಲ್ಲಾ, ದರೂ ಕೊಡಬಹುದಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಆ ಏರಿಯಾಕ್ಕೆ ೧೯೧೬ ರಿಂದ ನೀರು ಹೋಗುತ್ತಿಲ್ಲ. ಆದರೂ ಕೂಡ ಅಲ್ಲಿ ಕೆಲವು ಜನ ಹೋಗಿ ಆಬುದು ಮಾಡಿದ್ದಾರೆ, ಅವರಿಗೆ ಕೊಡಬೇಕೇ ಬಿಡಬೇಕೇ ಎಂಬುದು ಪ್ರಶ್ನೆ ಯಾಗಿದೆ. ಈ ಬಗ್ಗೆ ನಾನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಬರೆದು ಆ ಪ್ರದೇಶವನ್ನು ಅವರಿಗೆ ಕೊಟ್ಟರೆ ಕೆರೆಗೆ ಏನಾದರೂ ತೊಂದರೆಯಾಗುತ್ತದೆಯೇ ಅನಾಹುತವಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡುವಂತೆ ಸೂಚಿಸಿ, ಅವರಿಂದ ಉತ್ತರ ಬಂದ ಬಳಿಕ ಇವರ ಬೇಡಿಕೆಗಳನ್ನು ಪರಿಶೀಲನೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇಷ್ಟು ಹೇಳಿದ ಮೇಲೆ ಮಾನ್ಯ ಸದಸ್ಯರು ಸಂತೋಷಿಸು ತ್ತಾರೆಂದು ತಿಳಿದುಕೊಂಡಿದ್ದೇನೆ.

ಶ್ರೀ ವೈ. ರಾಮಕೃಷ್ಣ.—ಅಲ್ಲಿ ಎಷ್ಟು ಹರಿಜನ ಸಂಸಾರಗಳಿವೆ ಮತ್ತು ಅವರು ತಲಾ ಎಷ್ಟೆಷ್ಟು ಜಮೀನನ್ನು ಅಕ್ರಮಿಸಿಕೊಂಡಿದ್ದಾರೆ ಎಂಬ ವಿವರಗಳನ್ನು ದಯವಿಟ್ಟು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—೧೯೭೫-೭೬ರಿಂದ ಅಲ್ಲಿ ಜಮೀನನ್ನು ಅಕ್ರಮಿಸಿಕೊಂಡಿರತಕ್ಕ ೨೬೭ ಜನಗಳ ಪೈಕಿ ೧೩೦ ಮಂದಿ ಹರಿಜನರೂ, ೩೨ ಮಂದಿ ಗಿರಿಜನರೂ, ೭೮ ಮಂದಿ ಹಿಂದುಳಿದ ವರ್ಗ ದವರು ಮತ್ತು ೨೭ ಮಂದಿ ದುರ್ಬಲ ವರ್ಗದವರು ಇದ್ದಾರೆ.

ಶ್ರೀ ವೈ. ರಾಮಕೃಷ್ಣ.—ತಮಗೆ ಆ ಜನರು ಅರ್ಜಿ ಕೊಟ್ಟರೂ ಕೂಡ ಅದನ್ನು ಪರಿಗಣಿಸದೆ, ಜಿಲ್ಲಾಧಿಕಾರಿಗಳು, ಕಾರ್ಯದರ್ಶಿಯವರು ಏನು ವರದಿ ಕೊಟ್ಟಿದ್ದಾರೆ ಅದನ್ನು ತಂದು ಇಲ್ಲಿ ಹೇಳು ತ್ತಿದ್ದೀರಿ. ಅಷ್ಟು ದೊಡ್ಡ ಪ್ರಮಾಣದಲ್ಲಿ ಹರಿಜನ-ಗಿರಿಜನರಿಂದ, ಹಿಂದುಳಿದ ವರ್ಗದವರಿಂದ ಓಟು ತೆಗೆದುಕೊಂಡುಬಂದು ಇಲ್ಲಿ ಕುಳಿತಿದ್ದೀರಲ್ಲ, ಅವರಿಂದ ಅರ್ಜಿ ಬಂದರೆ ಏಕೆ ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ಮಾಡಿ ಹರಿಜನ-ಗಿರಿಜನರಿಗೇಕೆ ಆ ಏರಿಯಾದಲ್ಲಿರತಕ್ಕ ಜಮೀನನ್ನು ಇಷ್ಟು ವರ್ಷಗಳಾದರೂ ಮಂಜೂರು ಮಾಡಿಕೊಟ್ಟಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಆ ಏರಿಯಾದಲ್ಲಿ ಯಾರಿಗೂ ಜಮೀನನ್ನು ಕೊಡುವುದಕ್ಕೆ ಆಗುವುದಿಲ್ಲ ವೆಂದು ನಾನು ಆಗಲೇ ಸ್ಪಷ್ಟಪಡಿಸಿದ್ದೇನೆ. ಹರಿಜನ-ಗಿರಿಜನರಿಗೆ ಏಕೆ ಕೊಡಲಿಲ್ಲವೆಂದರೆ ಹೇಗೆ ಯಾರ್ಯಾರು ಹೋಗಿ ಅಲ್ಲಿ ಆಬಾದು ಮಾಡಿದ್ದಾರೋ ಅಂಥವರಿಗೆ ಆ ಏರಿಯಾದಲ್ಲಿ ಕೊಡುವುದರಿಂದ ಏನೂ ಅನಾನುಕೂಲವಾಗುವುದಿಲ್ಲವೆಂದು ಕಂಡುಬಂದರೆ ನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಆದು ನನ್ನ ಕ್ಷೇತ್ರದ ಬಾರ್ಡರ್‌ನಲ್ಲೇ ಬರುತ್ತದೆ. ಅಲ್ಲಿರತಕ್ಕ ಸುಮಾರು ಒಂದು ಸಾವಿರ ಎಕರೆ ಪ್ರದೇಶದಲ್ಲಿ ನೀರಾವರಿ ಆಗುವುದು ಕೇವಲ ೫೦ ಎಕರೆಗೆ ಅಷ್ಟಕ್ಕೆ ಮಾತ್ರ ಆ ಟ್ಯಾಂಕಿನಿಂದ ನೀರು ಕೊಡುತ್ತಿದ್ದಾರೆ. ಆ ಒಂದು ಸಾವಿರ ಎಕರೆ ಪೈಕಿ ಸುಮಾರು ೬೦೦ ಎಕರೆ ಜಮೀನನ್ನು ಕಳೆದ ೧೦-೧೫ ವರ್ಷಗಳಿಂದ ಹರಿಜನ-ಗಿರಿಜನರು ಮತ್ತಿತರರು ಸಾಗು ಮಾಡಿ ಕೊಂಡು ಬಂದಿದ್ದಾರೆ, ಅಷ್ಟೇ ಅಲ್ಲದೆ ಆ ಜಮೀನಿಗಾಗಿ ಹೊಡೆದಾಡಿ-ಬಡಿದಾಡಿಕೊಂಡು ಕೂಡ ಬಂದಿದ್ದಾರೆ. ಅಲ್ಲಿ ಯಾರು ಶ್ರೀಮಂತರಿದ್ದಾರೋ ಅವರೂ ಕೂಡ ಆ ಜಾಗವನ್ನು ಅತಿಕ್ರಮಣದಿಂದ ಸಾಗು ಮಾಡಿ ಅಲ್ಲಿರತಕ್ಕ ಬಡ ಜನರನ್ನು ಹೊಡೆದು ಬಡಿದು ಹೊರಗೆ ಕಳುಹಿಸತಕ್ಕ ಪ್ರಯತ್ನ ಮಾಡುತ್ತಿದ್ದಾರೆ. ಅಂಥ ಪ್ರಸಂಗವನ್ನು ತಪ್ಪಿಸಿ ಶಾಶ್ವತ ಪರಿಹಾರ ಕಾರ್ಯಕ್ರಮವನ್ನು ಯಾವಾಗ ಕೈಗೊಳ್ಳುತ್ತೀರೆಂದು ಕೇಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಆ ಬಗ್ಗೆ ಪದೇ ಪದೇ ಈ ಸಭೆಯಲ್ಲಿ ಹೇಳಿದ್ದೇನೆ. ನೀರಾವರಿ ಪ್ರದೇಶಗಳು ಎಷ್ಟಿವೆ, ಎಷ್ಟು ಮುಚ್ಚಿವೆ. ನೀರಾವರಿ ಪ್ರದೇಶಗಳಿಂದ ಎಷ್ಟು ಅನುಕೂಲವಾಗಿದೆ ಎಂಬುದರ ಬಗ್ಗೆ ತನಿಖೆ ಮಾಡುತ್ತಿದ್ದೇವೆ. ನಂತರ ಯಾವ ಯಾವ ಕೆರೆಗಳಲ್ಲಿ ಹೂಳು ತುಂಬಿದೆ ಅದನ್ನು ತೆಗೆಸಿ, ಯಾವ ಯಾವ ಕೆರೆ ಏರಿಯಾಗಳಲ್ಲಿ ಸಾಗುವಳಿ ಮಾಡುವುದಕ್ಕೆ ಜಮೀನನ್ನು ಮಂಜೂರು ಮಾಡ ಬಹುದೆಂಬುದನ್ನು ಪರಿಶೀಲನೆ ಮಾಡಬಹುದು. ಉದಾಹರಣೆಗೆ, ಮಂಡ್ಯ ಜಿಲ್ಲೆಯಲ್ಲಿ ನೋಡ ಬಹುದು, ಅಲ್ಲಿ ಸಾಮಾನ್ಯವಾಗಿ ಎಲ್ಲ ಕೆರೆಗಳಲ್ಲು ಹೂಳು ತುಂಬಿದೆ. ಹೀಗೆ ಎಲ್ಲ ಕಡೆಯ ಕೆರೆಗಳ ಪರಿಸ್ಥಿತಿಯು ಒಂದೇ ಆಗಿದೆ, ಆದರೂ ಕೂಡ ಅಂಥ ಪ್ರದೇಶಗಳಲ್ಲಿ ಬಗರ್ ಹುಕುಂ ಸಾಗುವಳಿ ಮಾಡು ತ್ತಿದ್ದಾರೆ. ಆದ್ದರಿಂದ, ಈ ಹಿನ್ನೆಲೆಯಲ್ಲಿ ಈ ಒಂದು ಸಮಸ್ಯೆಯನ್ನು ಬಿಡಿಸಲಿಕ್ಕೆ ಪ್ರಯತ್ನ ಮಾಡು ತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಮಾನ್ಯ ಅಧ್ಯಕ್ಷರೇ, ಇದು ನನ್ನ ತಾಲ್ಲೂಕಿಗೆ ಸಂಬಂಧಪಟ್ಟ ದ್ದಾಗಿದೆ.

ಶ್ರೀ ವೈ. ರಾಮಕೃಷ್ಣ.—ಸ್ವಾಮಿ, ತಾವು ನಾವು ಹೇಳಿದ ವಿಚಾರಗಳನ್ನೆಲ್ಲಾ ಪರಿಶೀಲನೆ ಮಾಡಿ ಆ ಹರಿಜನರಿಗೆ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಬೇಕು.

MR. SPEAKER.—There is limited scope under Rule 312.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಅಲ್ಲಿ ಹರಿಜನರು ಏನು ಉಪವಾಸ ಕುಳಿತಿದ್ದಾರೆ ಅವರಿಗೆ ಜಮೀನುಗಳನ್ನು ಕೊಡುವುದರ ಬಗ್ಗೆ ಒಂದು ಭರವಸೆಯನ್ನು ಕೊಟ್ಟರೆ ಸಾಕು. Their life is in danger. I would like to seek a clarification from the Hon'ble Minister.

10.30 A.M

MR. SPEAKER.—Let the member not shout and he may please resume his seat. There is limited scope under Rule 312. The hon member cannot be persist and request the Minister to answer again. and again I am not permitting.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಮಾನ್ಯ ರಾಜಶೇಖರ್‌ರವರಿಗೆ ೪ ಸಾರಿ ಅವಕಾಶ ಕೊಟ್ಟಿದ್ದೀರಿ. ನನಗೆ ಒಂದು ಸಾರಿಯಾದರೂ ಅವಕಾಶ ಕೊಡಲಿಲ್ಲ.

MR. SPEAKER.—The hon. member should not conduct himself in such a way. I am extremely sorry for his behaviour. If the hon. member were to repeat like that, I may have to name him.